2017 ಕ.ತೀ.ವ. 1755

## ಸನ್ಮಾನ್ಯ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

## ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಮತ್ತು ಇತರರು –ವಿರುದ್ಧ– ಶ್ರೀ ಅರವಿಂದ ಮತ್ತು ಮತ್ತೊಬ್ಬರು*

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿನಿಯಮದ 11ನೇ ಪ್ರಕರಣದ ಮೇರೆಗೆ ರಿಟ್ ಅರ್ಜಿ.

ಕರ್ನಾಟಕ ಭೂಕಂದಾಯ ಅಧಿನಿಯಮ, 1969 ರ 11ನೇ ನಿಯಮ.

ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು ರಿಟ್ ಅರ್ಜಿ ಸಂ. 2013ರ 9645 ಮತ್ತು 12359 ರಲ್ಲಿ ಹೊರಡಿಸಿದ ದಿನಾಂಕ 18/07/2014ರ ಆದೇಶವನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಮತ್ತು ಸದರಿ ಜಿಲ್ಲೆಯ ಇತರ ಇಬ್ಬರು ಅಧಿಕಾರಿಗಳು ಟೀಕಿಸಿದ್ದಾರೆ. ಆ ಆದೇಶದ ಮೂಲಕ, ಮಾನ್ಯ ಏಕಪೀಠ ಸದಸ್ಯ ನ್ಯಾಯಾಧೀಶರು ಮರಗಳನ್ನು ಉರುಳಿಸಲು ನೀಡಿದ ಅನುಮತಿಯ ದಿನಾಂಕದಂದು ಇರುವಂತೆ 'ಮಲ್ಕಿಗಳ' (ಮರಗಳು) ಮೌಲ್ಯಗಳನ್ನು ಸಂದಾಯಮಾಡಲು ಎದುರುದಾರರಿಗೆ ಸಂಬಂಧಿಸಿ ಸೂಚಿಸಿದ್ದಷ್ಟರ ಮಟ್ಟಿಗಿನ ಅನುಬಂಧ "ಎ" ಮತ್ತು 'ಬಿ" ನಲ್ಲಿರುವ ಸೂಚನೆಗಳನ್ನು, ರದ್ದುಗೊಳಿಸಿದ್ದಾರೆ ಮತ್ತು ರಿಟ್ ಅರ್ಜಿಗಳನ್ನು ಭಾಗಶಃ ಪುರಸ್ಕರಿಸಿದ್ದಾರೆ.

ಪ್ರಸ್ತುತ ಪ್ರಕರಣಕ್ಕೆ ಮೇಲೆ ಹೇಳಲಾದ ಅಭಿಪ್ರಾಯವನ್ನು ಅನ್ವಯಿಸಿದಲ್ಲಿ, ಪ್ರಶ್ನಿತ ಜಮೀನಿನ ಮಾಲೀಕರಾದ ಎದುರುದಾರರು ಕಾಡುಮರಗಳನ್ನು ಕಡಿಯಲು ಅರ್ಜಿಯನ್ನು

* ರಿಟ್ ಅಪೀಲು ಸಂಖ್ಯೆ.: 438/2015 (ಜಿಎಮ್–ಎಫ್ಒಆರ್),
ದಿನಾಂಕ: 4ನೇ ಸೆಪ್ಟೆಂಬರ್, 2015.

ಸಲ್ಲಿಸಿರುವವರು ಎಂಬುದು ತಿಳಿದುಬರುತ್ತದೆ. ಅವರು ಅನುಬಂಧ–"ಸಿ" ಯ ಪ್ರಶ್ನಿತ ಜಮೀನಿಗೆ ಸಂಬಂಧಿಸಿ ಅವರ ಭೂಮಿಯ ಹಕ್ಕನ್ನು ನೋಡಿದಲ್ಲಿ ಇದು, ಮೋಜಣಿ ಸಂ. 97 ರಲ್ಲಿ ನಾಲ್ಕು ಎಕರೆ ಜಮೀನಿನ ದರಖಾಸ್ತು ಜಮೀನಿನ ವಿಲೇವಾರಿ ಮಾಡಲು ವಿಶೇಷ ಉಪವಿಭಾಗಾಧಿಕಾರಿ ಚಿಕ್ಕಮಗಳೂರು ಇವರು ವ್ಯವಹರಣೆಗಳನ್ನು ಮಾನ್ಯ ಮಾಡಿರುತ್ತಾರೆ. ಆ ವ್ಯವಹರಣೆಗಳ ಮೇರೆಗೆ, 'ಮಲ್ಕಿ' ಮೌಲ್ಯ ಎಂದರೆ, ಮರಗಳ ಮೌಲ್ಯವನ್ನು ಭೂಮಿಯನ್ನು ಸ್ವಾಧೀನಕ್ಕೆ ನೀಡುವ ಮುಂಚೆ ಅನುದಾನಿತರಿಂದ ಸಂಗ್ರಹ ಮಾಡಲಾಗಿತ್ತು ಎಂಬುದು ತಿಳಿದುಬರುತ್ತದೆ. ೩೦೦೦/– ರೂ. ಮೊತ್ತವನ್ನು ಲೆಕ್ಕಹಾಕಲಾಗಿತ್ತು ಮತ್ತು 'ಮಲ್ಕಿಗಳ' ಮೌಲ್ಯದ ಸಂಬಂಧದಲ್ಲಿ ನೀಡಲಾದ ದಿನಾಂಕದಂದು ಸಂದಾಯ ಮಾಡಲಾಗಿತ್ತೆಂಬುದು ಎದುರುದಾರರ ವಾದವಾಗಿತ್ತು. ಆದಾಗ್ಯೂ, ಎರಡನೇ ಎದುರುದಾರನು ಮಾಡಿರುವ ಹಿಂದೆ ಹೇಳಲಾದ ಸಂದಾಯಕ್ಕೆ ಸಂಬಂಧಪಟ್ಟಂತೆ ತಹಸಿಲ್ದಾರ್‌ನ ಕಚೇರಿಯಲ್ಲಿ ನಿರ್ವಹಿಸಲಾದ ಮೂಲ ರಿಜಿಸ್ಟರಿನಲ್ಲಿ ಸೇರಿಸಲಾಗಿದೆಯೆಂದು ವಾದಿಸಿರುವುದನ್ನು ಮತ್ತು ಸಂದಾಯವನ್ನು ನಿಯಮಗಳ 11ನೇ ನಿಯಮದ ಮೇರೆಗೆ ಮಾಡಲಾಗಿದೆಯೆಂಬುದನ್ನು ಅಪೀಲುದಾರರು ಅಂಗೀಕರಿಸಿಲ್ಲ. ಆದುದರಿಂದ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, 'ಮಲ್ಕಿಗಳೆಂದು' ಪರಿಗಣಿಸಲಾದ ಪ್ರಶ್ನಿತ ಜಮೀನಿನಲ್ಲಿರುವ ಮರಗಳನ್ನು ಕಡಿದುರುಳಿಸುವ ಅಧಿಕಾರ ಎದುರುದಾರರಿಗಿಲ್ಲವೆಂದು, ರಾಜ್ಯದಲ್ಲಿ ಅವುಗಳನ್ನು ನಿಹಿತಗೊಳಿಸಬೇಕೆಂದು ವಾದಿಸಿದ್ದಾರೆ.

ಆದಾಗ್ಯೂ, ಅನುಬಂಧ–"ಸಿ" ಮತ್ತು "ಡಿ" ಯಲ್ಲಿರುವ ವಾದಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ, ಅವು ಪ್ರಶ್ನಿತ ಜಮೀನನ್ನು ಮಂಜೂರು ಮಾಡಿದ ಸಮಯದಲ್ಲಿ ಮಾಡಿದ ವ್ಯವಹರಣೆಗಳಾಗಿವೆ, ಮರಗಳ ಮೌಲ್ಯವನ್ನು ಸಂದಾಯ ಮಾಡಲಾಗಿತ್ತೆಂಬುದನ್ನು ಅಲ್ಲಿ ಟಿಪ್ಪಣಿ ಮಾಡಲಾಗಿದೆ. ಎದುರುದಾರರ ಪೂರ್ವಜರಿಗೆ ಮಂಜೂರು ಮಾಡಿದ ಸಮಯದಲ್ಲಿ ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ನಿರ್ಬಂಧವನ್ನು ಹೇರಿರಲಿಲ್ಲವೆಂದು ಸಂಗತಿಯಿಂದ ಪ್ರಸ್ತುತ ಪ್ರಕರಣದಲ್ಲಿ 'ಮಲ್ಕಿಗಳಿಗೆ' ಯಾವುದೇ ಮೌಲ್ಯವನ್ನು ಸಂದಾಯ ಮಾಡಿರಲಿಲ್ಲವೆಂದು ಆ ಕ್ಷಣಕ್ಕೆ ಸ್ವೀಕರಿಸಿದ್ದರೂ ಸಹ,

ಅದರಲ್ಲಿರುವ ಮರಗಳೊಂದಿಗೆ ಪ್ರಶ್ನಿತ ಜಮೀನನ್ನು ಅವರಿಗೆ ಮಂಜೂರು ಮಾಡಿದ್ದರೆಂದು ಅಭಿಪ್ರಾಯ ಪಡಲೇಬೇಕಾಗುತ್ತದೆ. ಅಲ್ಲದೆ, ಅಧಿನಿಯಮ, 1964 ರ 75ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಪ್ರಶ್ನಿತ ಜಮೀನಿನಲ್ಲಿದ್ದ ಮರಗಳಿಗೆ ಯಾವುದೇ ಹಕ್ಕಿನ ನಿರ್ಬಂಧವನ್ನು ವಿಧಿಸಿರಲಿಲ್ಲ. ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಲ್ಲಿನ ಎದುರುದಾರರು, ಪ್ರಶ್ನಿತ ಜಮೀನಿನಲ್ಲಿರುವ ಕಾಡುಮರಗಳನ್ನು ಕಡಿಯುವ ಮತ್ತು ರವಾನಿಸುವ ಹಕ್ಕನ್ನು ಹೊಂದಿರುವರೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಪ್ರಸ್ತುತ ಆದೇಶವನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾದಲ್ಲಿ* |
|---|---|
| *1. (1975) 1 ಕೆಎಲ್‌ಜೆ 372<br>ಕೆ.ಎಂ. ಬಷೀರ್ ಮತ್ತು ಕಂಪನಿ –ವಿರುದ್ಧ–<br>ಮೈಸೂರು ರಾಜ್ಯ ಮತ್ತು ಇತರರು* | *(ಉಲ್ಲೇ) 7* |
| *2. (1989) 2 ಕೆಎಲ್‌ಜೆ 260<br>ಎನ್.ಕೆ. ಬಷೀರ್ ಅಹಮದ್ –ವಿರುದ್ಧ–<br>ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು* | *(ಉಲ್ಲೇ) 7* |
| *3. 1986 (2) ಕೆಎಲ್‌ಜೆ 423<br>ಬಾಬಾಜನ್ ಎಚ್. –ವಿರುದ್ಧ–<br>ಅರಣ್ಯ ಉಪಸಂರಕ್ಷಣಾಧಿಕಾರಿ, ಭದ್ರಾವತಿ* | *(ಉಲ್ಲೇ) 7* |
| *4. ರಿಟ್ ಅರ್ಜಿ ಸಂಖ್ಯೆ: 1103/2010<br>ದಿನಾಂಕ: 30ನೇ ಜೂನ್, 2011<br>ಎಂ.ವಿ. ಸೂರ್ಯನಾರಾಯಣರಾವ್ –ವಿರುದ್ಧ–<br>ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ* | *(ಉಲ್ಲೇ) 7* |
| *5. ಎಐಆರ್ 1974 ಎಸ್‌ಸಿ 1375<br>ಮೈಸೂರು ರಾಜ್ಯ –ವಿರುದ್ಧ– ಎಂ.ಎಂ. ತಮ್ಮಯ್ಯ* | *(ಉಲ್ಲೇ) 7* |

ಅಪೀಲುದಾರರ ಪರವಾಗಿ : ಶ್ರೀ ವೈ.ಹೆಚ್. ವಿಜಯ ಕುಮಾರ್,
ಹೆಚ್ಚುವರಿ ಸರ್ಕಾರಿ ವಕೀಲರು;
ಪ್ರತ್ಯಪೀಲುದಾರರ ಪರವಾಗಿ : ಶ್ರೀ ತೇಜಸ್ವಿ ಸೂರ್ಯ, ವಕೀಲರು ಪರವಾಗಿ
ಶ್ರೀ ಆರ್. ಸುಬ್ರಮಣ್ಯ, ವಕೀಲರು

**ತೀರ್ಪು**

**ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ:**

ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು ರಿಟ್ ಅರ್ಜಿ ಸಂ. 2013 ರ 9645 ಮತ್ತು 12359 ರಲ್ಲಿ ಹೊರಡಿಸಿದ ದಿನಾಂಕ 18/07/2014ರ ಆದೇಶವನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಮತ್ತು ಸದರಿ ಜಿಲ್ಲೆಯ ಇತರ ಇಬ್ಬರು ಅಧಿಕಾರಿಗಳು ಟೀಕಿಸಿದ್ದಾರೆ. ಆ ಆದೇಶದ ಮೂಲಕ, ಮಾನ್ಯ ಏಕಪೀಠ ಸದಸ್ಯ ನ್ಯಾಯಾಧೀಶರು ಮರಗಳನ್ನು ಉರುಳಿಸಲು ನೀಡಿದ ಅನುಮತಿಯ ದಿನಾಂಕದಂದು ಇರುವಂತೆ 'ಮಲ್ಕಿಗಳ' (ಮರಗಳು) ಮೌಲ್ಯಗಳನ್ನು ಸಂದಾಯಮಾಡಲು ಎದುರುದಾರರಿಗೆ ಸಂಬಂಧಿಸಿ ಸೂಚಿಸಿದ್ದಷ್ಟರ ಮಟ್ಟಿಗಿನ ಅನುಬಂಧ 'ಎ' ಮತ್ತು 'ಬಿ' ನಲ್ಲಿರುವ ಸೂಚನೆಗಳನ್ನು, ರದ್ದುಗೊಳಿಸಿದ್ದಾರೆ ಮತ್ತು ರಿಟ್ ಅರ್ಜಿಗಳನ್ನು ಭಾಗಶಃ ಪುರಸ್ಕರಿಸಿದ್ದಾರೆ.

2. ಎದುರುದಾರರು, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಮೇಗುಂದ ಹೋಬಳಿಯ ಲೋಕನಾಥಪುರ ಗ್ರಾಮದ ಸರ್ವೆ ಸಂ.97 ರಲ್ಲಿ 4 ಎಕರೆ ಅಳತೆಯ ಜಮೀನಿನ ಮಾಲೀಕರಾಗಿರುವರೆಂದು ಹೇಳಲಾಗಿದೆ. ಅವರು, ಕಾಡುಮರಗಳನ್ನು ಕಡಿಯಲು ಅನುಮತಿ ಪಡೆಯುವ ಸಂಬಂಧ ಅರ್ಜಿಯನ್ನು ಸಲ್ಲಿಸಿದ್ದರು. ಅವರ ಅರ್ಜಿಗಳನ್ನು ಪರಿಗಣಿಸಿದ ನಂತರ, ತಹಶೀಲ್ದಾರ್ ರವರು, ದಿನಾಂಕ 18/10/2011 ರಂದು ಅನುಮತಿ ಪಡೆಯಲು ಅರಣ್ಯ ಉಪ ಸಂರಕ್ಷಣಾಧಿಕಾರಿಯವರಿಗೆ ಶಿಫಾರಸು ಮಾಡಿದ್ದಾರೆ. ಆದಾಗ್ಯೂ, ಉಪ

ವಿಭಾಗಾಧಿಕಾರಿಗಳು, ದಿನಾಂಕ 04/02/2012 ರ ತಮ್ಮ ಪತ್ರದ ಮೂಲಕ, ಕಾಡುಮರಗಳನ್ನು ಕಡಿಯಲು ಅವರಿಗೆ ಅನುಮತಿ ನೀಡಿದ್ದಾರೆ, ಪ್ರಸ್ತುತ 'ಮಲ್ಕಿಗಳ' ಮೌಲ್ಯವನ್ನು ಅವರು ಸಂದಾಯ ಮಾಡಬೇಕೆಂದು ತಿಳಿಸಿ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಕಳುಹಿಸಿದ್ದಾರೆ. ಅರಣ್ಯ ಉಪಸಂರಕ್ಷಣಾಧಿಕಾರಿಯವರಿಗೆ ಸದೃಶ ಸಾಲುಗಳಲ್ಲಿ ದಿನಾಂಕ 13/06/2012 ರಂದು ಬರೆದ ಪತ್ರವನ್ನು ಜಿಲ್ಲಾಧಿಕಾರಿಯವರಿಗೆ ತಲುಪಿದೆ. ಮೇಲೆ ಹೇಳಲಾದ ದಾಖಲೆಗಳು ರಿಟ್ ಅರ್ಜಿಯ 'ಎ' ಮತ್ತು 'ಬಿ' ಅನುಬಂಧಗಳಲ್ಲಿರುವ ದಾಖಲೆಗಳಾಗಿದ್ದು, ರಿಟ್ ಅರ್ಜಿಗಳಲ್ಲಿ ಅವುಗಳನ್ನು ಟೀಕಿಸಲಾಗಿತ್ತು.

3. ಎದುರುದಾರರು ಇಲ್ಲಿ ಹಿತಾಸಕ್ತಿಯಂತೆ ತಮ್ಮ ಪೂರ್ವಜರಿಗೆ ಜಮೀನು ಮಂಜೂರಾದ ದಿನಾಂಕದಂದು ಇದ್ದಂತೆ 'ಮಲ್ಕಿಗಳಿಗೆ' ಸಂಬಂಧಿಸಿದ ಯಾವುದೇ ಸಂದಾಯಗಳನ್ನು ಮಾಡಿರಲಿಲ್ಲವೆಂದು ಮತ್ತು ಇದರಿಂದ ರಾಜ್ಯದಲ್ಲಿ ನಿಹಿತವಾಗಿರುವ 'ಮಲ್ಕಿಗಳೆಂದು' ಮಂಜೂರಾದ ಮರಗಳನ್ನು ಕಡಿಯಲು ಅನುಮತಿಯನ್ನು ನೀಡಲಾಗುವುದಿಲ್ಲವೆಂದು ವಾದಿಸಿ ಇಲ್ಲಿ ಅಪೀಲುದಾರರು ರಿಟ್ ಅರ್ಜಿಗಳನ್ನು ವಿರೋಧಿಸಿದ್ದಾರೆ. ಪ್ರತಿಯೊಬ್ಬರಿಗೆ 3,000/- ರೂ. ಮೊತ್ತವೆಂದು ಜಾರಿಗೊಳಿಸಲಾದ ನಮೂದನೆಗಳಿಗೆ 20/05/1976 ರಂದು ಮತ್ತು 27/10/1980 ರಂದು, ಅನುಕ್ರಮವಾಗಿ ಚಲನ್ ಸಂ. 31 ಮತ್ತು 16ರ ಮೇರೆಗೆ ಸಂದಾಯ ಮಾಡಿದ್ದರೆಂದು, ತಹಸೀಲ್ದಾರ್‌ರವರು ನಿರ್ವಹಿಸಿದ ರಿಜಿಸ್ಟರಿನಲ್ಲಿ ಇದನ್ನು ಪ್ರಕ್ಷೇಪಗೊಳಿಸಲಾಗಿತ್ತೆಂದು ಮತ್ತು ಎದುರುದಾರರು ಸಮರ್ಪಕ ಸಾಕ್ಷ್ಯದ ಮೂಲಕ ರುಜುವಾತು ಪಡಿಸಬೇಕೆಂದು, ವಾಸ್ತವವಾಗಿ, ಸದರಿ ಸಂದಾಯಗಳನ್ನು ಸಂದಾಯ ಮಾಡಲಾಗಿದೆಯೆಂದು ವಾದಿಸಲಾಗಿದೆ.

4. ಮಾನ್ಯ ಏಕಪೀಠ ಸದಸ್ಯ ನ್ಯಾಯಾಧೀಶರು ಕಾನೂನು ಬಾಹಿರವಾಗಿ, ಪ್ರಾಧಿಕಾರಿಗಳು ನೀಡಿದ ಸಮರ್ಪಕ ಸಾಕ್ಷ್ಯವನ್ನು ರುಜುವಾತುಪಡಿಸಿದ್ದ ಹೊರತು ತಹಸೀಲ್ದಾರರು ನಿರ್ವಹಿಸಿದ ರಿಜಿಸ್ಟರಿನಲ್ಲಿ ನಮೂದನೆಗಳು ಅಥವಾ ಪ್ರಕ್ಷೇಪಗಳನ್ನು ನಮೂದಿಸಿದ್ದರೆಂಬ ಅಪೀಲುದಾರರ ವಾದವನ್ನು ಒಪ್ಪಿರಲಿಲ್ಲ. ಇಂಥ ಸನ್ನಿವೇಶಗಳಲ್ಲಿ,

ಸಮನ್ವಯ ಪೀಠಗಳ ಮೂರು ನಿರ್ಣಯಗಳ ಆಧಾರದ ಮೇಲೆ ಮಾನ್ಯ ಏಕಪೀಠ ನ್ಯಾಯಾಧೀಶರು ಅನುಬಂಧ 'ಎ' ಮತ್ತು 'ಬಿ' ಸಂದೇಶಗಳನ್ನು ರದ್ದುಗೊಳಿಸಿದ್ದಾರೆ ಭಾಗಶಃ ರಿಟ್ ಅರ್ಜಿಗಳನ್ನು ಪುರಸ್ಕರಿಸಿದ್ದಾರೆ.

5. ಸದರಿ ಆದೇಶವನ್ನು ಟೀಕಿಸುವಾಗ, ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಎದುರುದಾರರಿಗೆ ಮಂಜೂರಾತಿಯನ್ನು ನೀಡಿದ್ದಾಗ, ಮಂಜೂರಾತಿಯ ಸಮಯದಲ್ಲಿ, ಸದರಿ 'ಮಲ್ಕಿಗಳಿಗೆ' ಸಂಬಂಧ ಪಟ್ಟಂತೆ ಸಂದಾಯಗಳನ್ನು ಮಾಡಿದ ಹೊರತು 'ಮಲ್ಕಿಗಳು' ಅಥವಾ ಮರಗಳ ಹಕ್ಕು ರಾಜ್ಯಕ್ಕಿರುತ್ತದೆಂದು ವಾದಿಸಿದ್ದಾರೆ. ಅವರು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ (ಇಲ್ಲಿ ಇನ್ನುಮುಂದೆ 'ನಿಯಮಗಳೆಂದು' ಉಲ್ಲೇಖಿಸಲಾಗಿದೆ) 11ನೇ ನಿಯಮದ ಮೇರೆಗೆ 1975ನೇ ವರ್ಷದಲ್ಲಿ ಮಂಜೂರಾತಿ ಮಾಡಿದ್ದರಿಂದ ಆ ಮೊತ್ತವನ್ನು ಎದುರುದಾರರು ಸಂದಾಯ ಮಾಡಿರಲಿಲ್ಲವಾದ್ದರಿಂದ ಇದರ ಪರಿಣಾಮವಾಗಿ ತಹಸೀಲ್ದಾರನು ನಿರ್ವಹಿಸಿದ ರಿಜಿಸ್ಟರಿನಲ್ಲಿ ಸದರಿ ಮೊತ್ತವನ್ನು ಸಂದಾಯ ಮಾಡಲಾಗಿತ್ತೆನ್ನುವ ಪ್ರಕ್ಷೇಪಗಳನ್ನು ರುಜುವಾತು ಪಡಿಸಲಾಗಿತ್ತೆಂದು ವಾದಿಸಿದ್ದಾರೆ. ಜಮೀನನ್ನು ನಿಯಮಗಳ ಮೇರೆಗೆ ಪ್ರತೀ ಎಕರೆಗೆ 75/– ರೂ. ಗಳ ಅತ್ಯಂತ ಕಡಿಮೆ ಬೆಲೆಗೆ (ಎಪ್ಪತ್ತೈದು ರೂ. ಗಳು ಮಾತ್ರ) ಮಂಜೂರು ಮಾಡಲಾಗಿತ್ತೆಂದು ಮತ್ತು ಆ ಹಂತದಲ್ಲಿ 'ಮಲ್ಕಿಗಳಿಗೆ' ಸಂಬಂಧಿಸಿದ ಮೊತ್ತವನ್ನು ಸಂಗ್ರಹ ಮಾಡಿರಲಿಕ್ಕಿಲ್ಲವೆಂದು ಸಹ ವಾದಿಸಿದ್ದಾರೆ; ಆದ್ದರಿಂದ ಅವನು, ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶವು ಕಾನೂನಿಗನುಸಾರವಾಗಿರಲಿಲ್ಲವೆಂದು ಮತ್ತು ಆದೇಶವನ್ನು ತಳ್ಳಿಹಾಕಬೇಕೆಂದು ನಿವೇದಿಸಿದ್ದಾರೆ.

6. ಮತ್ತೊಂದು ಕಡೆಯಲ್ಲಿ, ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಳ್ಳುವಾಗ, ಎದುರುದಾರರಿಗೆ ನಷ್ಟ ಪರಿಹಾರ ನೀಡಿದ ಮಾನ್ಯ ಏಕಪೀಠ ನ್ಯಾಯಾಧೀಶರು ಆಧರಿಸಿದ ಈ ನ್ಯಾಯಾಲಯದ ಮೂರು ಆದೇಶಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಆದ್ದರಿಂದ ಇವರು, ಈ ಅಪೀಲಿನಲ್ಲಿ ಯಾವುದೇ ಹುರುಳಿಲ್ಲವೆಂದು ನಿವೇದಿಸಿದ್ದಾರೆ.

7. ನಾವು, ವಾದ–ಪ್ರತಿವಾದಗಳ ಆಧಾರದ ಮೇಲೆ ನಮ್ಮ ನಿರ್ಣಯವನ್ನು ನೀಡುವ ಮೊದಲು, ಇವು ಈ ವಿವಾದಕ್ಕೆ ಸುಸಂಗತವಾಗಿರುವುದರಿಂದ ಚಿಕ್ಕವಿವರಣೆಯಲ್ಲಿ, ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಈ ಮುಂದಿನ ಮೂರು ನಿರ್ಣಯಗಳನ್ನು ಪರಾಮರ್ಶಿಸುವುದು ಉಪಯುಕ್ತವಾಗುತ್ತದೆ:–

(ಎ) ***ಕೆ.ಎಂ. ಬಷೀರ್ ಮತ್ತು ಕಂಪನಿ –ವಿರುದ್ಧ– ಮೈಸೂರು ರಾಜ್ಯ ಮತ್ತು ಇತರರು*** [1], ಸಂಬಂಧ ಪಟ್ಟ ಮರಗಳು, ಕೊಡಗು ಜಿಲ್ಲೆಯಲ್ಲಿರುವ ಸಾಗು ಜಮೀನಿನಲ್ಲಿ ಇದ್ದವು; ಇದರಲ್ಲಿರುವ ಅರ್ಜಿದಾರರು ಜಮೀನಿನ ಮಾಲೀಕರಾಗಿಯಾಗಲಿ ಅಥವಾ ಜಮೀನಿನ ಮಾಲೀಕರಿಂದ ಸದರಿ ಮರಗಳನ್ನು ಖರೀದಿಸುವುದರಿಂದಾಗಲಿ ಇದರಲ್ಲಿ ಆಸಕ್ತಿಯುಳ್ಳವರಾಗಿದ್ದರು. ಇದರಲ್ಲಿನ ಜಮೀನುಗಳು ಬಿಡಿಸಿಕೊಂಡಿದ್ದಂಥ ಜಮೀನುಗಳಾಗಿದ್ದವು. ಮಾಲೀಕರು, ರಾಜ್ಯ ಸರ್ಕಾರಕ್ಕೆ ಜಮೀನಿಗೆ ಸಂಬಂಧಪಟ್ಟ ಕರವನ್ನು ಸಂದಾಯ ಮಾಡಿ ಜಮೀನುಗಳನ್ನು ಕಾನೂನುಬದ್ಧವಾಗಿ ಸ್ವಾಧೀನ ಪಡಿಸಿಕೊಂಡಿದ್ದರು. ಅರ್ಜಿದಾರರು ಇದರಲ್ಲಿ ತಾವು, ರಾಜ್ಯ ಸರ್ಕಾರಕ್ಕೆ ಅವುಗಳ ಮೌಲ್ಯ ಅಥವಾ ಯಾವುದೇ ಇತರ ಮೊತ್ತವನ್ನು ಸಂದಾಯ ಮಾಡದೆ ಜಮೀನಿನಲ್ಲಿದ್ದ ಮರಗಳನ್ನು ಕಡಿಯುವ ಮತ್ತು ತೆಗೆದುಹಾಕಲು ಹಕ್ಕುಳ್ಳವರಾಗಿದ್ದರೆಂದು ಕ್ಲೇಮು ಮಾಡಿದ್ದಾರೆ. ಸದರಿ ಕ್ಲೇಮು ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (ಇಲ್ಲಿ ಇನ್ನುಮುಂದೆ '1964 ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 75ನೇ ಪ್ರಕರಣದ ಮೇರೆಗೆ ಸದರಿ ಕ್ಲೇಮು ಆಧರಿಸಿತ್ತು. ಜಮೀನುದಾರಕನು ಸಾಗು ಜಮೀನಿನಲ್ಲಿದ್ದ ಮರಗಳಿಗೆ ಸಂದಾಯ ಮಾಡಿದಾಗೆಲ್ಲ. ಜಮೀನನ್ನು ಬಿಡಿಸಿಕೊಂಡಿದ್ದು ಜಮೀನುಗಳೆಂದು ಪರಿಭಾವಿಸಲಾಗಿತ್ತು ಮತ್ತು ಅಂಥ ಸಂದಾಯಗಳನ್ನು ಮಾಡದಿದ್ದಾಗ, ಅವುಗಳನ್ನು ಬಿಡಿಸಿಕೊಂಡಿರದ ಜಮೀನುಗಳೆಂದು ಪರಿಭಾವಿಸಲಾಗಿತ್ತೆಂದು ಅಭಿಪ್ರಾಯ ಪಡಲಾಗಿತ್ತು. ಅಲ್ಲಿನ ಜಮೀನುಗಳು ಬಿಡಿಸಿಕೊಂಡ ಜಮೀನುಗಳೆಂಬ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಹಿಂದೆ ಹೇಳಲಾದ ಅಧಿನಿಯಮ ಜಾರಿಯಲ್ಲಿ ಬರುವುದಕ್ಕೆ ಮೊದಲು ಸಹ ಜಮೀನಿನ

1. (1975) 1 ಕೆಎಲ್‌ಜೆ 372

ಮಾಲೀಕರು ಜಮೀನಿನಲ್ಲಿದ್ದ ಮರಗಳಿಗೆ ವಾಸ್ತವವಾಗಿ ಸಂದಾಯ ಮಾಡಿರುವುದರಿಮದ, ರಾಜ್ಯ ಸರ್ಕಾರವು ಅಧಿನಿಯಮ, 1964 ರ 75ನೇ ಪ್ರಕರಣದ ಮೇರೆಗೆ ಜಮೀನುಗಳಲ್ಲಿದ್ದ ಯಾವುದೇ ಮರಗಳಿಗೆ ಸಂಬಂಧಪಟ್ಟಂತೆ ಯಾವುದೇ ಮೀಸಲನ್ನು ಮಾಡಿರಲಿಲ್ಲವೆಂದು ಇದು ಅಭಿಪ್ರಾಯಪಟ್ಟಿತ್ತು.

ಹಾಗೆಯೇ, ರಾಜ್ಯ ಸರ್ಕಾರವು, ಆದೇಶ ನೀಡುವುದರ ಮೂಲಕ ಅಥವಾ ಅಧಿಸೂಚನೆ ಹೊರಡಿಸುವುದರ ಮೂಲಕ ಸರ್ವೆ ಅಧಿಕಾರಿಯ ಮೂಲಕ ಮಾಡಲಾಗಿದ್ದ ಇತ್ಯರ್ಥದ ಸಮಯದಲ್ಲಿ ಅದರಲ್ಲಿನ ಅರ್ಜಿದಾರರ ಜಮೀನಿನಲ್ಲಿದ್ದ ಮರಗಳ ಹಕ್ಕಿನ ಸಂಬಂಧದಲ್ಲಿ ಯಾವುದೇ ಮೀಸಲನ್ನು ನೀಡಿರಲಿಲ್ಲವೆಂಬುದನ್ನು ತೋರಿಸಲು ಈ ನ್ಯಾಯಾಲಯದ ಮುಂದೆ ಯಾವುದೇ ಮಾಹಿತಿಯನ್ನು ದಾಖಲುಪಡಿಸಿರುವುದಿಲ್ಲ.

ಅಧಿನಿಯಮ, 1964 ರ 75(1) ನೇ ಪ್ರಕರಣದ ಭಾಷೆಯನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರವು ಜಮೀನಿನಲ್ಲಿರುವ ಮರಗಳಲ್ಲಿ ಯಾವುದೇ ಹಕ್ಕನ್ನು ಇಟ್ಟುಕೊಂಡಿರಲಿಲ್ಲವೆಂಬುದನ್ನು, ತೋರಿಸುವ ಹೊಣೆಯು ಸರ್ಕಾರದ ಮೇಲಿರಲಿಲ್ಲವೆಂದು ಏಕೆಂದರೆ, ಅಂಥ ರುಜುವಾತನ್ನು ಮಾಡದಿದ್ದಲ್ಲಿ ಅಧಿಭೋಗದಾರನು, ಮರಗಳ ಒಡೆಯನೆಂಬುದಾಗಿ ಪೂರ್ವಭಾವಿಸಬೇಕೆಂದು ಅಭಿಪ್ರಾಯಪಟ್ಟಿತ್ತು.

ದಾಖಲೆಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ, ಸರ್ಕಾರವು ಇದರಲ್ಲಿರುವ ಅರ್ಜಿದಾರರಿಗೆ ಸೇರಿದ ಜಮೀನಿನಲ್ಲಿರುವ ಮರಗಳಲ್ಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯನ್ನು ಹೊಂದಿತ್ತೆಂದು ಅಭಿಪ್ರಾಯಪಡಲು ಸಾಧ್ಯವಿಲ್ಲ. ಇದು ವ್ಯವಹರಣೆಗೆ ಸಂಬಂಧಿಸಿದ ವಸ್ತುವಿಷಯವಾಗಿತ್ತು. ಹಾಗಾಗಿ, ಇದರಲ್ಲಿರುವ ಅರ್ಜಿದಾರರು, ಜಮೀನಿನಲ್ಲಿರುವ ಮರಗಳ ಮೌಲ್ಯಕ್ಕೆ ರಾಜ್ಯಕ್ಕೆ ಯಾವುದೇ ಮೊತ್ತವನ್ನು ಸಂದಾಯ ಮಾಡಿ, ಅವುಗಳನ್ನು ಕಡಿಯುವ ಅಥವಾ ತೆಗೆಯುವ ಪ್ರಸ್ತಾವನೆಯನ್ನು ಮಾಡುವ ಪ್ರಶ್ನೆ ಉದ್ಭವಿಸಿಲ್ಲ. ಆದುದರಿಂದ ರಾಜ್ಯವು, ಜಮೀನಿನ ಮಾಲೀಕರಿಗಾಗಲಿ

ಅಥವಾ ಅವರಿಂದ ಮರಗಳನ್ನು ಖರೀದಿಸಿದ್ದ ವ್ಯಕ್ತಿಗಳಿಗಾಗಲಿ ಮರಗಳನ್ನು ಕಡಿಯಲು ಮತ್ತು ಉರುಳಿಸಲು ಅನುಮತಿಯನ್ನು ನೀಡುವ ಮೊದಲು ಪ್ರಶ್ನಿತ ಮರಗಳ ಮೌಲ್ಯಕ್ಕೆ ಯಾವುದೇ ಸಂದಾಯ ಮಾಡುವುದನ್ನು ಒತ್ತಿಹೇಳಲು ನಿರ್ದೇಶಿತವಾಗಿರುವುದಿಲ್ಲ. ವಿಭಾಗೀಯ ಅರಣ್ಯ ಅಧಿಕಾರಿಯು ಸಹ, ಮರಗಳ ಮೌಲ್ಯದ ರೂಪದಲ್ಲಿ ಯಾವುದೇ ಮೊತ್ತವನ್ನು ಸಂದಾಯ ಮಾಡುವುದನ್ನು ಒತ್ತಿಹೇಳದೆ ಮರಗಳನ್ನು ಕಡಿಯಲು ಮತ್ತು ಉರುಳಿಸುವ ಸಂಬಂಧ ಪಾಸುಗಳನ್ನು ಹೊರಡಿಸಲು ನಿರ್ದೇಶಿತರಾಗಿದ್ದರು.

(ಬಿ) ***ಎನ್.ಕೆ. ಬಷೀರ್ ಅಹಮದ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು*** [2], ಪ್ರಕರಣದಲ್ಲಿ ವಿಭಾಗೀಯ ಅರಣ್ಯ ಅಧಿಕಾರಿ ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು, ಇವರು ದಿನಾಂಕ 13/12/1976 ರಂದು ಹೊರಡಿಸಿದ ಹಿಂಬರಹ ಹಾಗೂ ದಿನಾಂಕ 19/06/1980 ರಂದು ರಾಜ್ಯ ಸರ್ಕಾರವು ಹೊರಡಿಸಿದ ಹಿಂಬರಹದ ಕಾನೂನು ಸಮ್ಮತತೆ ಹಾಗೂ ಸರಿತನವನ್ನು ಪ್ರಶ್ನಿಸಲಾಗಿತ್ತು.

ಒಡೆತನ ಮೌಲ್ಯಕ್ಕೆ ಸಂಬಂಧಿಸಿದಂತೆ ಇಷ್ಟಕ್ಕೆ ವಿರುದ್ಧವಾಗಿ ಇದರಲ್ಲಿರುವ ಅರ್ಜಿದಾರನು ಜಮೆಮಾಡಿದ ಮೊತ್ತವನ್ನು ಮರುಪಾವತಿಸಲು ಸೂಚನೆಯನ್ನು ಸಹ ಕೋರಲಾಗಿತ್ತು. ಚನ್ನಬಸವೇ ಗೌಡ ಎಂಬೊಬ್ಬರಿಗೆ ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆಯ ಬೋಗಸೆ ಗ್ರಾಮದಲ್ಲಿರುವ ನಿವೇಶನ ಸಂ. 173ರಲ್ಲಿ, ಕಾಫಿ ಬೆಳೆಯುವ ಉದ್ದೇಶಕ್ಕೆ ಐದು ಎಕರೆ ಜಮೀನು ಮಂಜೂರಾಗಿತ್ತು ಮತ್ತು ಅವನು ಕಾಫಿ ಅಧಿನಿಯಮದ 14ನೇ ಪ್ರಕರಣದ ಮೇರೆಗೆ ತಾನು ಮಾಲೀಕನೆಂದು ನೋಂದಣಿ ಮಾಡಿಸಿದ್ದನು ಮತ್ತು ಅವನ ಹೆಸರನ್ನು ಹಕ್ಕುದಾಖಲೆಯಲ್ಲಿ ಪರಿವರ್ತಿತವಾಗಿತ್ತು ಎಂಬುದು ಸಂಗತಿಯಾಗಿತ್ತು. ಚನ್ನಬಸವೇ ಗೌಡನು, ಜಮೀನಿನಲ್ಲಿರುವ ಮರಗಳ ಮಾರಾಟ ಮಾಡಲು ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರನೊಟ್ಟಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಾನೆ. ಅರ್ಜಿದಾರನು ಮರಗಳನ್ನು

2. (1989) 2 ಕೆಎಲ್‌ಜೆ 260

ಕಡಿಯಲು ಅವನು ಮಾಫಿ ಪಾಸ್ (Mafi Pass) ಎಂದರೆ ಕರ್ನಾಟಕ ಅರಣ್ಯ ಅಧಿನಿಯಮ, 1963 ರ ಮೇರೆಗೆ ರವಾನೆ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದನು. ಸದರಿ ಪಾಸ್‌ಅನ್ನು ನೀಡುವ ಬದಲು ಮಾರಾಟ ತೆರಿಗೆ ಮತ್ತು ಅರಣ್ಯ ಅಭಿವೃದ್ಧಿ ತೆರಿಗೆ ಜೊತೆಗೆ ಈಗಿರುವ ಒಡೆತನ ಮೌಲ್ಯದಲ್ಲಿ 357 ಮರದ ದಿಮ್ಮಿ, 368 ಟನ್ನು ಕಟ್ಟಿಗೆಯ ಮೌಲ್ಯವನ್ನು ಕೋರಲಾಗಿತ್ತು. ಇದರಲ್ಲಿರುವ ಅರ್ಜಿದಾರನು ಇಷ್ಟಕ್ಕೆ ವಿರುದ್ಧವಾಗಿ ಅದನ್ನು ಸಂದಾಯ ಮಾಡಿದ್ದನು. ಅವನು ಒಡೆತನ ಮೌಲ್ಯದ ಸಂದಾಯಕ್ಕೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸಿದ್ದನು ಮತ್ತು ಅದನ್ನು ಮರುಪಾವತಿ ಮಾಡಲು ಕೋರಿದ್ದನು. ರಾಜ್ಯ ಸರ್ಕಾರವು ಅರ್ಜಿದಾರನ ಮನವಿಯನ್ನು ಸಮ್ಮತಿಸಿರಲಿಲ್ಲ ಮತ್ತು ಅರ್ಜಿಯಲ್ಲಿ ಪ್ರಶ್ನಿಸಲಾದ ಹಿಂಬರಹಗಳನ್ನು ನೀಡಲಾಗಿತ್ತು. ಹಿಂಬರಹಗಳಿಂದ ಬಾಧಿತರಾದ ಇದರಲ್ಲಿ ಅರ್ಜಿದಾರರು ಈ ನ್ಯಾಯಾಲಯದ ಮೊರೆಹೋಗಿದ್ದರು. ಚನ್ನಬಸವೇಗೌಡನಿಗೆ ನೀಡಿದ ಸಾಗುವಳಿ ಚಿಟ್‌ನಲ್ಲಿ ಶ್ರೀಗಂಧದ ಮರಗಳ ಸಂಬಂಧದಲ್ಲಿ ಮಾತ್ರ ಮೀಸಲನ್ನು ನೀಡಲಾಗಿದೆ ಇತರ ಮರಗಳ ಸಂಬಂಧದಲ್ಲಿ ನೀಡಲಾಗಿಲ್ಲವೆಂದು ವಾದಿಸಲಾಗಿತ್ತು. ಆದುದರಿಂದ, ಶ್ರೀಗಂಧದ ಮರಗಳಲ್ಲದೆ ಇದರಲ್ಲಿರುವ ಮರಗಳನ್ನು ಒಳಗೊಂಡಂತೆ ಪ್ರಶ್ನಿತ ಜಮೀನಿಗೆ ಸಂಬಂಧಪಟ್ಟ ಎಲ್ಲಾ ಹಕ್ಕುಗಳನ್ನು ಆರ್ಜಿಸಲಾಗಿತ್ತೆಂದು, ಮರಗಳನ್ನು ಕಡಿಯುವ ಮತ್ತು ಅವುಗಳನ್ನು ಕೆಡವುವ ಹಕ್ಕನ್ನು ಹೊಂದಿದ್ದರೆಂಬುದು ವಾದವಾಗಿತ್ತು.

***ಬಾಬಾಜನ್ ಎಚ್. –ವಿರುದ್ಧ– ಅರಣ್ಯ ಉಪಸಂರಕ್ಷಣಾಧಿಕಾರಿ, ಭದ್ರಾವತಿ*** [3], ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯವನ್ನು ಆಧರಿಸಿರುವುದಲ್ಲದೆ ನಿಯಮಗಳ 11ನೇ ನಿಯಮ ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು ಉಲ್ಲೇಖಿಸುವ ಮೂಲಕ ರಾಜ್ಯದ ಪರವಾಗಿ ಆ ವಾದವನ್ನು ಪ್ರಶ್ನಿಸಲಾಗಿತ್ತು.

ಈ ನ್ಯಾಯಾಲಯವು, ಅಧಿನಿಯಮ, 1964ರ 91, 93, 75 ಮತ್ತು 76ನೇ ಪ್ರಕರಣಗಳು ಮತ್ತು ಕರ್ನಾಟಕ ಅರಣ್ಯ ಅಧಿನಿಯಮ, 1963 ರ 80ನೇ

3. 1986 (2) ಕೆಎಲ್‌ಜೆ 423

ಪ್ರಕರಣವನ್ನು ಪರಿಗಣಿಸಿದೆ ಮತ್ತು ಅಧಿನಿಯಮ, 1964 ರ 91ನೇ ಮತ್ತು 75ನೇ ಪ್ರಕರಣಗಳನ್ನು ಒಟ್ಟಿಗೆ ಓದಿಕೊಳ್ಳುವ ಆಧಾರದ ಮೇಲೆ, ಜಮೀನಿನ ಅನುದಾನಿತನು, ಆ ಜಮೀನಿನಲ್ಲಿರುವ ಮರಗಳಿಗೆ ಸಂಬಂಧಪಟ್ಟ ಅಧಿಭೋಗದಾರನಾಗಿದ್ದನೆಂಬುದು ಸ್ಪಷ್ಟವಾಗಿತ್ತೆಂದು ಅಭಿಪ್ರಾಯಪಟ್ಟಿದೆ. ಆದುದರಿಂದ, ಮರಗಳನ್ನು ಮೀಸಲಿರಿಸಿದ ಹೊರತು, ಅಂಥ ಜಮೀನಿನ ದರವು, ಅಂಥ ಮರಗಳನ್ನು ಮಾರಾಟ ಮಾಡಲು ಇರುವ ಸರ್ಕಾರದ ದರವನ್ನು ಒಳಗೊಳ್ಳುತ್ತದೆ. ಹಾಗೆಯೇ ಜಮೀನಿನ ಮಾಲೀಕನು ಜಮೀನಿನಲ್ಲಿರುವ ಮರಗಳಿಗೆ ಸಂದಾಯ ಮಾಡಿದಲ್ಲಿ, ಅನುದಾನಿತನು ಜಮೀನಿನಲ್ಲಿರುವ ಮರಗಳ ಸಂಬಂಧದಲ್ಲಿ ಸಂಪೂರ್ಣ ಹಕ್ಕುಗಳನ್ನು ಹೊಂದಿದ್ದರೆ ಹೇಗೋ ಹಾಗೆ ಪೂರ್ವಭಾವಿಸಲಾಗಿತ್ತು.

***ಬಾಬಾಜನ್***ನ ಪ್ರಕರಣದ (ಮೇಲಿನ) ಸಂಬಂಧದಲ್ಲಿ ಜಮೀನಿನ ಸ್ವಾಧೀನತೆಯನ್ನು ಹೊಂದಿರುವ ವ್ಯಕ್ತಿಗಳು ಆ ಪ್ರಕರಣದಲ್ಲಿ ಮಂಜೂರಾತಿರಾಗಿದ್ದರೆಂದು ಮತ್ತು ಅವರು ತಮ್ಮ ಸ್ವಂತದ ಯಾವುದೇ ಹಕ್ಕಿನ ಮೇರೆಗೆ ಜಮೀನನ್ನು ಹೊಂದಿರಲಿಲ್ಲವೆಂದು ಆದುದರಿಂದ, ಅವರನ್ನು ಜಮೀನಿನ ಅನುಭೋಗದಾರರೆಂದು ಪರಿಭಾವಿಸಿರಲಿಲ್ಲವೆಂದು ಅಭಿಪ್ರಾಯಪಟ್ಟಿತ್ತು. ***ಬಾಬಾಜನ್*** ರವರ ಪ್ರಕರಣ ತನ್ನದೇ ಆದ ಸಂಗತಿಗಳಿಂದ ತಿರುವನ್ನು ಪಡೆದುಕೊಂಡಿದೆ ಮತ್ತು ***ಎನ್.ಕೆ. ಬಷೀರ್*** ಅಥವಾ ***ಕೆ.ಎಂ. ಬಷೀರ್*** ಮತ್ತು ಕಂಪನಿ ಪ್ರಕರಣವಾಗಲಿ, ಈ ಸಂಗತಿಗಳಿಗೆ ಸಂಬಂಧಿಸುವುದಿಲ್ಲ. ***ಬಾಬಾಜನ್*** ಪ್ರಕರಣವು, ಆ ಪ್ರಕರಣದಲ್ಲಿ ಅರ್ಜಿದಾರನು ಪ್ರಶ್ನಿತ ಮರಗಳಿಗೆ ಸಂಬಂಧಿಸಿದ ಹಕ್ಕುಗಳು ಪ್ರಾಪ್ತವಾಗಿದ್ದವೇ ಎಂಬ ಪ್ರಶ್ನೆಯನ್ನು ಪರಿಶೀಲಿಸುವಾಗ, ಯಾವುದೇ ಅರ್ಜಿಯು ಮುಂದಿರಲಿಲ್ಲ. ತದನುಸಾರವಾಗಿ, ಹಿಂಬರಹಗಳು ರದ್ದುಗೊಂಡಿದ್ದವು ಮತ್ತು ಇದರಲ್ಲಿನ ಅರ್ಜಿದಾರನಿಂದ ಪಡೆಯಲಾದ ಒಡೆತನದ ಮೌಲ್ಯವನ್ನು ಮರುಸಂದಾಯ ಮಾಡಲು ನಿರ್ದೇಶನ ನೀಡಲಾಗಿತ್ತು.

(ಸಿ) ***ಎಂ.ವಿ. ಸೂರ್ಯನಾರಾಯಣರಾವ್ –ವಿರುದ್ಧ– ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ*** [4], ಪ್ರಕರಣದಲ್ಲಿ, ಇದರಲ್ಲಿರುವ ಅರ್ಜಿದಾರನು ಅವುಗಳನ್ನು ಪಡೆದುಕೊಳ್ಳಲು ಅದಕ್ಕೆ ನೀಡಿದ ಮರಗಳ ಮಾರುಕಟ್ಟೆ ಮೌಲ್ಯವನ್ನು ಠೇವಣಿಯಾಗಿಡಬೇಕೆಂಬ ಸೂಚನೆಯನ್ನು ಪ್ರಶ್ನಿಸಿದ್ದನು. ಮರಗಳ ಪ್ರಾಧಿಕಾರವು ವಶಪಡಿಸಿಕೊಳ್ಳಬೇಕಾದಂಥ ಮರ ಮತ್ತು ಬೀಟೆ ಮರಗಳಿಗೆ ಜಮೆ ಮಾಡಬೇಕೆಂದು ಸೂಚಿಸಿತ್ತು. ದಿನಾಂಕ 10/05/1972 ರಂದು ಅತೀ ಕಡಿಮೆ ಬೆಲೆಗೆ ಜಮೀನನ್ನು ಖರೀದಿಸಿರುವ ಇದರ ಅರ್ಜಿದಾರ ತಂದೆಗೆ ನೀಡಿದ ಸಾಗುವಳಿ ಚಿಟ್‌ನ (6)ನೇ ಖಂಡವನ್ನು ಪರಾಮರ್ಶಿಸಿದ ತರುವಾಯ, ಸದರಿ ಜಮೀನಿನಲ್ಲಿರುವ ಶ್ರೀಗಂಧದ ಮರಗಳ ವಿಷಯದಲ್ಲಿ ಮಾತ್ರ ರಾಜ್ಯ ಸರ್ಕಾರಕ್ಕೆ ನಿರ್ಬಂಧ ವಿಧಿಸಿತ್ತೆಂದು ಮತ್ತು ಜಮೀನಿನ ಮಾರಾಟದ ಸಮಯದಲ್ಲಿ ಇತರ ಮರಗಳಿಗೆ ರಾಜ್ಯ ಸರ್ಕಾರಕ್ಕೆ, ಅರ್ಜಿದಾರನ ತಂದೆಗೆ ನಿರ್ಬಂಧ ವಿಧಿಸಿರಲಿಲ್ಲವೆಂದು ಅಭಿಪ್ರಾಯಪಟ್ಟಿತ್ತು.

ಏಕಪೀಠ ನ್ಯಾಯಾಧೀಶರಾದ ಮಾನ್ಯ ***ಎನ್.ಕೆ. ಬಷೀರ್*** ರವರ ವಾದವನ್ನು ಉಲ್ಲೇಖಿಸಿದ ನಂತರ, ನಿರ್ದಿಷ್ಟ ಮರಗಳ ವರ್ಗಕ್ಕೆ ರಾಜ್ಯ ಸರ್ಕಾರವು ನಿರ್ಬಂಧ ಹೇರಿದ್ದ ಹೊರತು, ನಿರ್ದಿಷ್ಟ ವ್ಯಕ್ತಿಯ ಹೆಸರಿನಲ್ಲಿ ರಾಜ್ಯ ಸರ್ಕಾರವು ಮಾರಾಟ ಮಾಡಿದ ಜಮೀನಿನಲ್ಲಿರುವ ಮರಗಳು ಖರೀದಿದಾರನಿಗೆ ನಿಹಿತಗೊಳಿಸುವುದೆಂದು ಅಭಿಪ್ರಾಯಪಡಲಾಗಿತ್ತು. ಆ ಪ್ರಕರಣದಲ್ಲಿ, ಅರ್ಜಿದಾರನು ಜಮೀನನ್ನು ಮಾತ್ರ ಖರೀದಿಸಿರದೆ ಅವಶ್ಯಕವಾದ ಮೊತ್ತವನ್ನು ಸಂದಾಯ ಮಾಡುವ ಮೂಲಕ ಜಮೀನಿನಲ್ಲಿದ್ದ ಮರವನ್ನು ಸಹ ಖರೀದಿಸಿದ್ದನೆಂಬುದು ತಿಳಿದುಬರುತ್ತದೆ. ಪ್ರಶ್ನಿತ ಮರಗಳನ್ನು ಖರೀದಿಸಲು ಅರ್ಜಿದಾರನು ಮೊತ್ತವನ್ನು ಸಂದಾಯ ಮಾಡಿರಲಿಲ್ಲವೆಂದು ಭಾವಿಸಿದ್ದರೂ ಕೂಡ ***ಎನ್.ಕೆ. ಬಷೀರ್ ಅಹ್ಮದ್*** ರವರ ಪ್ರಕರಣದಲ್ಲಿನ ಹೇಳಿಕೆ ಪ್ರಕಾರ ಅಂಥ ಜಮೀನಿನಲ್ಲಿರುವ ಮರಗಳ ಸಂಬಂಧದಲ್ಲಿ ಅವನು

4. ರಿಟ್ ಅರ್ಜಿ ಸಂ. 1103/2010, ದಿನಾಂಕ: 30ನೇ ಜೂನ್, 2011

ಅಧಿಭೋಗದಾರನಾಗಲು ಹಕ್ಕುಳ್ಳವನಾಗಿದ್ದನು. ತದನುಸಾರವಾಗಿ, ಮರಗಳನ್ನು ವಶಪಡಿಸಿಕೊಂಡ ಆದೇಶವನ್ನು ರದ್ದುಗೊಳಿಸಲಾಗಿತ್ತು.

(ಡಿ) ***ಮೈಸೂರು ರಾಜ್ಯ –ವಿರುದ್ಧ– ಎಂ.ಎಂ. ತಮ್ಮಯ್ಯ*** [5] ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಧಿನಿಯಮ, 1964ರ 75(1)ನೇ ಪ್ರಕರಣದ ಮೇರೆಗೆ, ಯಾವುದೇ ಜಮೀನಿನಲ್ಲಿರುವ ಎಲ್ಲಾ ಮರಗಳಿಗೆ ನೀಡಿದ ರಾಜ್ಯ ಸರ್ಕಾರದ ಹಕ್ಕುಗಳನ್ನು ರಾಜ್ಯ ಸರ್ಕಾರದ ಮೂಲಕ ಅಥವಾ ಯಾವುದೇ ಸಮೀಕ್ಷಾಧಿಕಾರಿಯ ಮೂಲಕ ಮಾಡಲಾದ ವ್ಯಕ್ತ ಆದೇಶದ ಮೂಲಕ ಮಾಡಲಾಗಿದೆಯೇ ಅಥವಾ ಅಂಥ ಇತ್ಯರ್ಥದ ಸಮಯವನ್ನು ಕುರಿತಂತೆ ಮಾಡಲಾಗಿದೆಯೇ ಅಥವಾ ಅಧಿಸೂಚನೆ ಮೂಲಕ ಮಾಡಲಾಗಿದೆಯೇ ಮತ್ತು ಪ್ರಕಟಿಸಲಾಗಿದೆಯೇ ಅಂಥ ಇತ್ಯರ್ಥದ ನಂತರ ಯಾವುದೇ ಸಮಯದಲ್ಲಿ ಆಗಿದೆಯೇ ಎಂಬುದನ್ನು ಹೊರತುಪಡಿಸಿ ಅಧಿಭೋಗದಾರನಿಗೆ ಒಪ್ಪಿಸಲಾಗಿದೆಯೆಂದು ಭಾವಿಸತಕ್ಕದ್ದು.

ಆದುದರಿಂದ, ಒಮ್ಮೆ ವ್ಯಕ್ತಿಯು ಜಮೀನಿನ ಅಧಿಭೋಗದಾರನಾಗಿದ್ದನೆಂದು ಅಂಗೀಕರಿಸಿರಲಿ ಅಥವಾ ರುಜುವಾತುಪಡಿಸಿರಲಿ ಆಗ, ಇದನ್ನು, ರಾಜ್ಯ ಸರ್ಕಾರವು ಅಥವಾ ಇತ್ಯರ್ಥದ ಸಮಯದಲ್ಲಿ ಸಮೀಕ್ಷಾಧಿಕಾರಿಯು, ಅಥವಾ ಅಂಥ ಇತ್ಯರ್ಥದ ನಂತರ ಯಾವುದೇ ಸಮಯದಲ್ಲಿ ಹೊರಡಿಸಲಾದ ಮತ್ತು ಪ್ರಕಟಿಸಲಾದ ಅಧಿಸೂಚನೆ ಮೂಲಕ ಯಾವುದೇ ಮರಗಳ ಸಂಬಂಧದಲ್ಲಿ ನಿರ್ಬಂಧ ಇತ್ತು ಎಂಬುದನ್ನು ರಾಜ್ಯ ಸರ್ಕಾರವು ತೋರಿಸಿದ ಹೊರತು ಅದರಲ್ಲಿರುವ ಎಲ್ಲಾ ಮರಗಳಿಗೆ ಅವನು ಹಕ್ಕುಳ್ಳವನಾಗುವನು.

8. ಮೇಲೆ ಹೇಳಲಾದ ಅಭಿಪ್ರಾಯದಿಂದ, ಅನುಮೋದನೆ ನೀಡುವ ಸಮಯದಲ್ಲಿ ಮರಗಳನ್ನು ನಿರ್ದಿಷ್ಟವಾಗಿ ನಿರ್ಬಂಧಪಡಿಸಿದ ಹೊರತು, ಅಂಥ

5. ಎಐಆರ್ 1974 ಎಸ್‌ಸಿ 1375

ಜಮೀನಿನ ಮಾರಾಟ ಅಥವಾ ಅನುಮೋದನೆಯು ಮರಗಳ ಮಾರಾಟ ಅಥವಾ ಅನುಮೋದನೆಯನ್ನು ಒಳಗೊಂಡಿರುತ್ತದೆ ಎಂಬುದು ತಿಳಿದುಬರುತ್ತದೆ. ಹಾಗೆಯೇ, ವ್ಯಕ್ತಿಯ ಹೆಸರಿನಲ್ಲಿ ಮಾರಾಟವಾದ ಅಥವಾ ಅನುದಾನಿತವಾದ ಜಮೀನಿನಲ್ಲಿರುವ ನಿರ್ದಿಷ್ಟ ಮರದ ಬಗೆಗೆ ಮಾತ್ರ ನಿರ್ಬಂಧ ಹೇರುವಲ್ಲಿ, ಎಲ್ಲಾ ಮರಗಳಿಗೆ ಹೇರದಿರಲಿ, ಒಂದು ರೀತಿಯ ಪರಿಸ್ಥಿತಿಯಿರುತ್ತದೆ. ಆಗ, ಅದನ್ನು ಖರೀದಿದಾರನಿಗೆ ನಿಹಿತಗೊಳಿಸಲಾಗುವುದು. ಅಲ್ಲದೆ, ಮಾರಾಟದ ಸಮಯದಲ್ಲಿ ಜಮೀನಿನಲ್ಲಿರುವ ಮರಗಳಿಗೆ ಹೆಚ್ಚುವರಿ ದರವನ್ನು ನೀಡಲು ಒತ್ತಾಯಪಡಿಸಿದ್ದಲ್ಲಿ, ಆಗ ಒಂದು ರೀತಿಯ ಪರಿಸ್ಥಿತಿಯಿರುತ್ತದೆ. ವ್ಯತಿರಿಕ್ತವಾಗಿ ಮರಗಳ ಮೌಲ್ಯ ಅಥವಾ ದರವನ್ನು ಒಳಗೊಂಡಂತೆ ಆ ಸಮಯದಲ್ಲಿ ಮಾರಾಟ ಅಥವಾ ಮಂಜೂರಾತಿ ಇರುತ್ತದೆ.

9. ಪ್ರಸ್ತುತ ಪ್ರಕರಣಕ್ಕೆ ಮೇಲೆ ಹೇಳಲಾದ ಅಭಿಪ್ರಾಯವನ್ನು ಅನ್ವಯಿಸಿದಲ್ಲಿ, ಪ್ರಶ್ನಿತ ಜಮೀನಿನ ಮಾಲೀಕರಾದ ಎದುರುದಾರರು ಕಾಡುಮರಗಳನ್ನು ಕಡಿಯಲು ಅರ್ಜಿಯನ್ನು ಸಲ್ಲಿಸಿರುವರು ಎಂಬುದು ತಿಳಿದುಬರುತ್ತದೆ. ಅವರು ಅನುಬಂಧ–'ಸಿ' ಯ ಪ್ರಶ್ನಿತ ಜಮೀನಿಗೆ ಸಂಬಂಧಿಸಿ ಅವರ ಭೂಮಿಯ ಹಕ್ಕನ್ನು ನೋಡಿದಲ್ಲಿ ಇದು, ಮೋಜಣಿ ಸಂ. 97ರಲ್ಲಿ ನಾಲ್ಕು ಎಕರೆ ಜಮೀನಿನ ದರಖಾಸ್ತು ಜಮೀನಿನ ವಿಲೇವಾರಿ ಮಾಡಲು ವಿಶೇಷ ಉಪವಿಭಾಗಾಧಿಕಾರಿ ಚಿಕ್ಕಮಗಳೂರು ಇವರು ವ್ಯವಹರಣೆಗಳನ್ನು ಮಾನ್ಯ ಮಾಡಿರುತ್ತಾರೆ. ಆ ವ್ಯವಹರಣೆಗಳ ಮೇರೆಗೆ, 'ಮಲ್ಕಿ' ಮೌಲ್ಯ ಎಂದರೆ, ಮರಗಳ ಮೌಲ್ಯವನ್ನು ಭೂಮಿಯನ್ನು ಸ್ವಾಧೀನಕ್ಕೆ ನೀಡುವ ಮುಂಚೆ ಅನುದಾನಿತರಿಂದ ಸಂಗ್ರಹ ಮಾಡಲಾಗಿತ್ತು ಎಂಬುದು ತಿಳಿದುಬರುತ್ತದೆ. 3000/– ರೂ. ಮೊತ್ತವನ್ನು ಲೆಕ್ಕಹಾಕಲಾಗಿತ್ತು ಮತ್ತು 'ಮಲ್ಕಿಗಳ' ಮೌಲ್ಯದ ಸಂಬಂಧದಲ್ಲಿ ನೀಡಲಾದ ದಿನಾಂಕದಂದು ಸಂದಾಯ ಮಾಡಲಾಗಿತ್ತೆಂಬುದು ಎದುರುದಾರರ ವಾದವಾಗಿತ್ತು. ಆದಾಗ್ಯೂ, ಎರಡನೇ ಎದುರುದಾರನು ಮಾಡಿರುವ ಹಿಂದೆ ಹೇಳಲಾದ ಸಂದಾಯಕ್ಕೆ ಸಂಬಂಧಪಟ್ಟಂತೆ ತಹಸೀಲ್ದಾರ್‌ನ ಕಚೇರಿಯಲ್ಲಿ ನಿರ್ವಹಿಸಲಾದ ಮೂಲ ರಿಜಿಸ್ಟರಿನಲ್ಲಿ ಸೇರಿಸಲಾಗಿದೆಯೆಂದು ವಾದಿಸಿರುವುದನ್ನು

ಮತ್ತು ಸಂದಾಯವನ್ನು ನಿಯಮಗಳ 11ನೇ ನಿಯಮದ ಮೇರೆಗೆ ಮಾಡಲಾಗಿದೆಯೆಂಬುದನ್ನು ಅಪೀಲುದಾರರು ಅಂಗೀಕರಿಸಿಲ್ಲ. ಆದುದರಿಂದ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, 'ಮಲ್ಕಿಗಳೆಂದು' ಪರಿಗಣಿಸಲಾದ ಪ್ರಶ್ನಿತ ಜಮೀನಿನಲ್ಲಿರುವ ಮರಗಳನ್ನು ಕಡಿದುರುಳಿಸುವ ಅಧಿಕಾರ ಎದುರುದಾರರಿಗಿಲ್ಲವೆಂದು, ರಾಜ್ಯದಲ್ಲಿ ಅವುಗಳನ್ನು ನಿಹಿತಗೊಳಿಸಬೇಕೆಂದು ವಾದಿಸಿದ್ದಾರೆ.

10. ಆದಾಗ್ಯೂ, ಅನುಬಂಧ–'ಸಿ' ಮತ್ತು 'ಡಿ' ಯಲ್ಲಿರುವ ವಾದಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ, ಅವು ಪ್ರಶ್ನಿತ ಜಮೀನನ್ನು ಮಂಜೂರು ಮಾಡಿದ ಸಮಯದಲ್ಲಿ ಮಾಡಿದ ವ್ಯವಹರಣೆಗಳಾಗಿವೆ, ಮರಗಳ ಮೌಲ್ಯವನ್ನು ಸಂದಾಯ ಮಾಡಲಾಗಿತ್ತೆಂಬುದನ್ನು ಅಲ್ಲಿ ಟಿಪ್ಪಣಿ ಮಾಡಲಾಗಿದೆ. ಎದುರುದಾರರ ಪೂರ್ವಜರಿಗೆ ಮಂಜೂರು ಮಾಡಿದ ಸಮಯದಲ್ಲಿ ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ನಿರ್ಬಂಧವನ್ನು ಹೇರಿರಲಿಲ್ಲವೆಂದು ಸಂಗತಿಯಿಂದ ಪ್ರಸ್ತುತ ಪ್ರಕರಣದಲ್ಲಿ 'ಮಲ್ಕಿಗಳಿಗೆ' ಯಾವುದೇ ಮೌಲ್ಯವನ್ನು ಸಂದಾಯ ಮಾಡಿರಲಿಲ್ಲವೆಂದು ಆ ಕ್ಷಣಕ್ಕೆ ಸ್ವೀಕರಿಸಿದ್ದರೂ ಸಹ, ಅದರಲ್ಲಿರುವ ಮರಗಳೊಂದಿಗೆ ಪ್ರಶ್ನಿತ ಜಮೀನನ್ನು ಅವರಿಗೆ ಮಂಜೂರು ಮಾಡಿದ್ದರೆಂದು ಅಭಿಪ್ರಾಯ ಪಡಲೇಬೇಕಾಗುತ್ತದೆ. ಅಲ್ಲದೆ, ಅಧಿನಿಯಮ, 1964ರ 75ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಪ್ರಶ್ನಿತ ಜಮೀನಿನಲ್ಲಿದ್ದ ಮರಗಳಿಗೆ ಯಾವುದೇ ಹಕ್ಕಿನ ನಿರ್ಬಂಧವನ್ನು ವಿಧಿಸಿರಲಿಲ್ಲ. ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಲ್ಲಿನ ಎದುರುದಾರರು, ಪ್ರಶ್ನಿತ ಜಮೀನಿನಲ್ಲಿರುವ ಕಾಡುಮರಗಳನ್ನು ಕಡಿಯುವ ಮತ್ತು ರವಾನಿಸುವ ಹಕ್ಕನ್ನು ಹೊಂದಿರುವರೆಂದು ಅಭಿಪ್ರಾಯಪಡಲಾಗಿದೆ.

11. ಹಾಗಾಗಿ, ಅನುಮತಿಯನ್ನು ನೀಡಿದ ದಿನಾಂಕದಂದು 'ಮಲ್ಕಿಗಳ' ಮೌಲ್ಯವನ್ನು ಸಂದಾಯ ಮಾಡಲು ಇಲ್ಲಿ ಎದುರುದಾರರಿಗೆ ಸೂಚಿಸಿ ಹೊರಡಿಸಿ

ಅನುಬಂಧ–'ಎ' ಮತ್ತು 'ಬಿ' ನಲ್ಲಿರುವ ಮಾಹಿತಿಯನ್ನು ಮಾನ್ಯ ಏಕಪೀಠ ನ್ಯಾಯಾಧೀಶರು ಸರಿಯಾಗಿ ರದ್ದುಗೊಳಿಸಿದ್ದಾರೆ.

12. ಈ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳಿರುವುದಿಲ್ಲ.

13. ಈ ಅಪೀಲನ್ನು, ಯಾವುದೇ ವೆಚ್ಚಗಳಿಲ್ಲದೆ ವಜಾಗೊಳಿಸಲಾಗಿದೆ.